ಆಟೋಗಳ ಬಗ್ಗೆ ಮೊನ್ನೆ ಸ್ನೇಹಿತರೊಬ್ಬರು ಹೇಳುತ್ತ "ಹೋಗೋದು ಹೋಗ್ತಾನೇ ಇರುತ್ವೆ... ಮುಖ ಮೂತಿ ಎಲ್ಲ ಮುಂದಕ್ಕೇ ಇರುತ್ತೆ... ಹಾಗೇ ಹೋಗ್ತದೇನೋ ಅಂತ ಪಕ್ಕದಲ್ಲಿ ಹಾಯೋದಕ್ಕೆ ಹೋದ್ರೆ ಥಟಾರನೆ ಎಡಕ್ಕೋ ಬಲಕ್ಕೋ ಹೊರಳಿ ನಮ್ಮನ್ನ ಕಂಗಾಲು ಮಾಡೋದಲ್ಲದೆ ನಮ್ಮ ವಾಹನಗಳ ಮೈಕೈ ಸವರಿ ಕುಶಾಲು ಮಾತಾಡಿ ಕಳಿಸ್ತವೆ ಕಣ್ರೀ ಈ ಆಟೋಗಳು..." ಅನ್ನುತ್ತಿದ್ದರು.

ಆಟೊ ಅನ್ನುವ ಶಬ್ದ ಕಿವಿಗೆ ಬೀಳುತ್ತಿದ್ದಂತೆ ಯಾರ್‍ಯಾರಿಗೆ ಏನೇನೂ ಭಾವನೆಗಳು ಮೂಡುತ್ತವೋ ಗೊತ್ತಿಲ್ಲ. ನನ್ನ ಪಾಲಿಗಂತೂ ಸದ್ಯಕ್ಕೆ ಒಳ್ಳೆ ನೆನಪುಗಳೇ ಇವೆ. ಪೊಲೀಸರಿಗಂತೂ ಆಟೊ ಅನ್ನುವುದು ತಾತ್ಕಾಲಿಕ ತಂಗುದಾಣದಂಥದು. ಹಗಲುಗಸ್ತಿನಿಂದಾಗಿಯೋ, ಬಂದೋಬಸ್ತಿನಿಂದಾಗಿಯೋ ನಿಂತು ನಿಂತು ಕಾಲು ಸೆಳೆದು ಸೋಲುವಂಥಾ ಸಮಯದಲ್ಲಿ ಯಾವುದೋ ರಸ್ತೆಯೊಂದರ ಕ್ರಾಸಿನಲ್ಲಿ ಆಟೊ ಎಂಬ ಆಪತ್ಕಾಲದ ಬಂಟ ಕಣ್ಣಿಗೆ ಬಿದ್ದೇ ಬೀಳುತ್ತಾನೆ. ಅದರೊಳಗೆ ಕುಳಿತಿರುವ ಯಜಮಾನ ನೆಂಟನನ್ನು ಬರಮಾಡಿಕೊಳ್ಳುವ ಅತಿಥೇಯನಂತೆ 'ಬರ್ರಿ ಸಾ... ಬರ್ರೀ... ಡ್ಯೂಟಿ ಇದ್ದಿದ್ದೇ... ಒಸಿ ಕುಂತ್ಕಂಡು ಸುಧಾರಿಸ್ಕಂಡು ಹೋಗುವಿರಂತೆ...' ಎಂದು ಖಾಕಿಧಾರಿಗಳಿಗೆ ಆಮಂತ್ರಣವೀಯುವುದು ಯೂನಿಫಾರ್ಮಿನ ಮಹಿಮೆಯೋ, ಆ ಆಟೊ ಓಡಿಸುವ ಶ್ರಮಜೀವಿಯ ದೊಡ್ಡತನವೋ ಇದುವರೆಗೂ ಗೊತ್ತಾಗಿಲ್ಲ. ಅಂತೂ ಎಲ್ಲರಿಗೂ ಸಿಗದ ಆತ್ಮೀಯತೆಯೊಂದು ಪೊಲೀಸಪ್ಪನಿಗೆ ದಕ್ಕುವುದು ನಿಜ.

ಇದಕ್ಕೂ ಮೀರಿದ ವೃತ್ತಿಸಂಬಂಧಿ ಪ್ರಯೋಜನಗಳುಂಟು. ಪರಿಚಯದ ಆಟೊದವನೊಬ್ಬನನ್ನು ಪೊಲೀಸಿನವರು ಮಾತಿಗೆಳೆದರೆ ಸಾಕು. ಆ ಇಡೀ ಬಡಾವಣೆಯ ಸಾಮಾಜಿಕ ಚಿತ್ರಣವೇ ಸಿಕ್ಕುವುದಲ್ಲದೆ ಅದಕ್ಕಿರುವ ಅಪರಾಧದ ಹಲವು ಆಯಾಮಗಳೂ ಕಾಣ ಸಿಗುತ್ತವೆ. ಅದಕ್ಕೆಂದೇ ಆಯಾ ಬೀಟಿನ ಸಿಬ್ಬಂದಿಗಳು ಅದೇ ಏರಿಯಾದ ಒಂದಿಬ್ಬರು ಪರಿಚಯಸ್ಥ ಆಟೊ ಮಂದಿಯನ್ನು ಇಟ್ಟುಕೊಂಡಿರುತ್ತಾರೆ. ಏರಿಯಾಕ್ಕೆ ಬರುವ ಹೊಸ ಮುಖಗಳು, ವಿದೇಶಿಗಳು ಮತ್ತು ಅವರು ಬರುವ ಹೋಗುವ ಸಮಯ, ಮಾಡುವ ವಿಚಿತ್ರ ವರ್ತನೆಗಳು, ಪಡ್ಡೆ ಹೈಕಳು ತಮ್ಮ ಅಡ್ಡೆಗಳನ್ನು ಹಾಕಲು ಹುಡುಕಿಕೊಳ್ಳುವ ಸರ್ಕಲ್ಲುಗಳು, ಅನೈತಿಕ, ಅವ್ಯವಹಾರಗಳನ್ನು ಶುರು ಹಚ್ಚಿಕೊಂಡಿರುವ ತಾಣಗಳು ಇವುಗಳೆಲ್ಲದರ ಮಾಹಿತಿ ಬಹುತೇಕ ದೊರೆಯುವುದು ಈ ಮೂರು ಚಕ್ರದ ಮಾಲೀಕರಿಂದಲೇ.

ಹಾಗೆ ನೋಡಿದರೆ ಕಳ್ಳರಿಗೂ ಆಟೊಗಳೆಂದರೆ ಅಲರ್ಜಿಯೇನಿಲ್ಲ. ಅವರಿಗೂ ಇದು ಒಂದು ಥರಾ ಆಪದ್ಬಾಂಧವನಿದ್ದಂತೆಯೇ. ಏಕೆಂದರೆ ತಮ್ಮ ಕೈಚಳಕ ತೋರಿದ ನಂತರ ಆ ಸ್ಥಳದಿಂದ ತಕ್ಷಣಕ್ಕೆ 'ಗಾಯಬ್' ಆಗಲು ಅವರಿಗೆ ಸಿಕ್ಕುವುದು ಈ ಆಟೊಗಳೇ. ಹಾಗಂತ ಆಟೊದವನೇನು